**ಸಾಕ್ಷಿಯನ್ನು ದಿನಾಂಕ 27-10-2023 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1, 2, 4 ಮತ್ತು 5 ನೇ ಪ್ರತಿವಾದಿಯರ ಪರ ಶ್ರೀ ಎಸ್.ಎನ್.ಬಿ. ವಕೀಲರಿಂದಃ**

ನನಗೆ ಕನ್ನಡ ಓದಲು-ಬರೆಯಲು ಅಲ್ಪ-ಸ್ವಲ್ಪ ಬರುತ್ತದೆ. ನಾನು 5 ನೇ ತರಗತಿಯವರಗೆ ವಿದ್ಯಾಭ್ಯಾಸ ಮಾಡಿದ್ದೇನೆ.

ಈ ದಾವೆಯ ಪ್ರತಿವಾದಿಯರೆಲ್ಲರು ಮೋದಿನ್ ಪಟೇಲ್ ಎಂಬಾತನ ಮೊಮ್ಮಕ್ಕಳು ಎಂದರೆ ಸರಿ. ದಾವಾ ಸ್ವತ್ತು ಪ್ರತಿವಾದಿಯರ ಅಜ್ಜ ಮೋದಿನ್ ಪಟೇಲಗೆ ಸೇರಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಸ್ವ-ಇಚ್ಛೆಯಿಂದ ಮಸ್ತಾನಸಾಬನಿಗೆ ಸೇರಿತ್ತು ಎನ್ನುತ್ತಾರೆ. ಮಸ್ತಾನ ಸಾಬನ ತಂದೆಯ ಹೆಸರು ಸಹ ಮೋದಿನ ಪಟೇಲ್ ಎಂದು ಸೂಚಿಸಿದರೆ ಸಾಕ್ಷಿ ಮಸ್ತಾನ ಸಾಬನ ತಂದೆಯ ಹೆಸರು ಮೋದಿನ ಸಾಬ ಎನ್ನುತ್ತಾರೆ. ಮಸ್ತಾನ ಸಾಬ ತನ್ನ ತಂದೆಯ ಹೆಸರನ್ನು ದುರುಪಯೋಗಪಡಿಸಿಕೊಂಡು ವಾದಿಯರ ಅಜ್ಜ ಮೋದಿನ ಪಟೇಲನ ಹೆಸರಿನಿಂದ ದಾವಾ ಸ್ವತ್ತನ್ನು ತನ್ನ ಹೆಸರಿಗೆ ಮಾಡಿಕೊಂಡಿದ್ದ ಎನ್ನುವುದು ಸರಿಯಲ್ಲ. 2015 ನೇ ಇಸವಿಯಲ್ಲಿ ಮಸ್ತಾನ ಸಾಬ ತನ್ನಿಂದ ತಪ್ಪಾಗಿದೆ ಎಂದು ಒಪ್ಪಿಕೊಂಡು ದಾವಾ ಸ್ವತ್ತಿನ ಖಾತೆಯನ್ನು ಪ್ರತಿವಾದಿಯರ ಅಜ್ಜ ಮೋದಿನ್ ಸಾಬನ ಹೆಸರಿಗೆ ವರ್ಗಾವಣೆ ಮಾಡಬೇಕೆಂದು ಒಪ್ಪಿಗೆ ಪತ್ರ ಬರೆದುಕೊಟ್ಟಿದ್ದ ಎನ್ನುವುದು ಸುಳ್ಳು. ಸಾಕ್ಷಿ ಸ್ವ-ಇಚ್ಛೆಯಿಂದ ಪ್ರತಿವಾದಿಯರು ನಮ್ಮ ಊರಿನವರೇ ಅಲ್ಲ ಎನ್ನುತ್ತಾರೆ. ಪ್ರತಿವಾದಿಯರು ತಮ್ಮ ಜೀವನೋಪಾಯದ ಸಲುವಾಗಿ ಬೇರೆ-ಬೇರೆ ಊರಿಗೆ ಹೋಗಿ ನೆಲೆಸಿದ್ದಾರೆ ಎಂದರೆ ಸಾಕ್ಷಿ ಅವರೆಲ್ಲ ಹೈದ್ರಾಬಾದಿಗೆ ಹೋಗಿದ್ದಾರೆ ಎನ್ನುತ್ತಾರೆ.

ಮಸ್ತಾನ ಸಾಬನಿಂದ ನೀವು ದಾವಾ ಸ್ವತ್ತನ್ನು ಖರೀದಿ ಮಾಡುವಾಗ ಯಾವ ರೀತಿ ದಾಖಲೆ ಬರೆಸಿಕೊಂಡಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿ ಛಾಪಾ ಕಾಗದದ ಮೇಲೆ ಖರೀದಿ ಪತ್ರ ಬರೆಸಿಕೊಂಡು ಖರೀದಿ ಮಾಡಿದ್ದೆ ಎನ್ನುತ್ತಾರೆ. ಸದರಿ ಖರೀದಿ ಪತ್ರದ ಪ್ರಕಾರ ನಾನು ಕ್ರಯದ ಮೊಬಲಗಾದ ಪೂರಾ 12,500/-ರೂಪಾಯಿಗಳನ್ನು ಮಸ್ತಾನ ಸಾಬನಿಗೆ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ನಿಪಿ-3 ರ ದಾಖಲೆ ಬರೆಸುವಾಗ ಪೂರಾ 12,500/- ರೂಪಾಯಿಯನ್ನು ಮಸ್ತಾನಸಾಬನಿಗೆ ಕೊಟ್ಟಿಲ್ಲ ಎಂದರೆ ಸರಿ. ಸಾಕ್ಷಿ ಸ್ವ-ಇಚ್ಛೆಯಿಂದ ನಿಪಿ-3 ರ ದಾಖಲೆಯನ್ನು ಬರೆದ ಒಂದು ವರ್ಷಗಳ ನಂತರ ಮಸ್ತಾನ ಸಾಬನಿಗೆ ಬಾಕಿ ರೂ.6,500/- ಹಣ ಕೊಟ್ಟು ಕಾಗದ ಬರೆಸಿಕೊಂಡಿದ್ದೇನೆ ಎನ್ನುತ್ತಾರೆ. ಮಸ್ತಾನ ಸಾಬನಿಗೆ ಬಾಕಿ ರೂ.6,500/- ಹಣ ಕೊಟ್ಟು ಬರೆಸಿಕೊಂಡಿದ್ದೇನೆ ಎಂದು ನಾನು ಹೇಳುತ್ತಿರುವ ಕಾಗದವನ್ನು

ನ್ಯಾಯಾಲಯಕ್ಕೆ ಕೊಟ್ಟಿಲ್ಲ.

ಮಸ್ತಾನ ಸಾಬನಿಗೆ ಬಾಕಿ ಹಣ ಕೊಟ್ಟು ನಿಪಿ-3 ರ ಖರೀದಿ ಪತ್ರವನ್ನು ನೋಂದಣಿ ಮಾಡಿಸಿಕೊಡುವಂತೆ ಕೇಳಿದ್ದಿರಾ ಎಂದರೆ ಸಾಕ್ಷಿ ಕೇಳಿದ್ದೆ, ಆದರೆ ಆಗ ನನ್ನ ಬಳಿ ಹಣ ಇರಲಿಲ್ಲ ಮತ್ತು ನನ್ನ ತಾಯಿಗೂ ಅನಾರೋಗ್ಯವಿತ್ತು ಹಾಗಾಗಿ ನಿಪಿ-3 ರ ದಾಖಲೆಯನ್ನು ನೋಂದಣಿ ಮಾಡಿಸಲು ಆಗಲಿಲ್ಲ ಎನ್ನುತ್ತಾರೆ. ನಿಪಿ-3 ರ ದಾಖಲೆಯನ್ನು ಬರೆದುಕೊಟ್ಟ 2-3 ವರ್ಷಗಳ ನಂತರ ನಾನು ಮಸ್ತಾನ ಸಾಬನನ್ನು ಭೇಟಿಯಾಗಿ ಅದನ್ನು ನೋಂದಣಿ ಮಾಡಿಸಿಕೊಡುವಂತೆ ಕೇಳಿದ್ದೆ. ಮಸ್ತಾನ ಸಾಬ ನೋಂದಣಿ ಮಾಡಿಸಿಕೊಡಲು ಬರದೆ ಇದ್ದಾಗ ನೀವೇನಾದರೂ ಆತನಿಗೆ ನೋಟಿಸು ಕೊಟ್ಟಿದ್ದಿರಾ ಎಂದರೆ ಸಾಕ್ಷಿ ನೋಟಿಸು ಕೊಟ್ಟಿಲ್ಲ ಆದರೆ ಮಸ್ತಾನ ಸಾಬ ಬರುತ್ತೇನೆ ಅಂತಾ ಹೇಳಿ ಬರಲಿಲ್ಲ ಎನ್ನುತ್ತಾರೆ.

ನಿಪಿ-3 ನ್ನು ಹೊರತುಪಡಿಸಿ ಮಸ್ತಾನ ಸಾಬನ ಬಳಿ ಬೇರೆ ಕಾಗದ ಪತ್ರ ಬರೆಸಿಕೊಂಡಿದ್ದಿರಾ ಎಂದರೆ ಸಾಕ್ಷಿ ಬರೆಸಿಕೊಂಡಿದ್ದೇನೆ ಎನ್ನುತ್ತಾರೆ. ಸದರಿ ಕಾಗದವನ್ನು 2008 ನೇ ಇಸವಿಯಲ್ಲಿ ಬರೆಸಿಕೊಂಡಿದ್ದೇನೆ. ತಾರಿಖು, ತಿಂಗಳು ನನಗೆ ನೆನಿಪಿಲ್ಲ. ಆಗ ಬೇಸಿಗೆ ಕಾಲ ಇತ್ತು.

ಮಸ್ತಾನ ಸಾಬ 2015 ನೇ ಇಸವಿಯಲ್ಲಿ ಬರೆದುಕೊಟ್ಟ ಒಪ್ಪಿಗೆ ಪತ್ರದ ಆಧಾರದ ಮೇಲೆ ದಾವಾ ಸ್ವತ್ತಿನ ಖಾತೆ 1 ನೇ ಪ್ರತಿವಾದಿ ಹೆಸರಿಗೆ ಬದಲಾವಣೆ ಆಗಿದೆ ಎಂದರೆ ಸರಿ. 1 ನೇ ಪ್ರತಿವಾದಿ ಹೆಸರಿಗೆ ದಾವಾ ಸ್ವತ್ತಿನ ಖಾತೆ ಬದಲಾವಣೆ ಆಗಿರುವುದನ್ನು ಪ್ರಶ್ನೆ ಮಾಡಿ ನಾನು ಮೇಲ್ಮನವಿ ಸಲ್ಲಿಸಿಲ್ಲ.

ದಾವಾ ಸ್ವತ್ತಿನ ಕಂದಾಯ ದಾಖಲೆಗಳಲ್ಲಿ ದಾವಾ ಸ್ವತ್ತಿನಲ್ಲಿ ಮಸೀದಿ ಇರುವ ಬಗ್ಗೆ ಉಲ್ಲೇಖ ಇದೆ ಎಂದರೆ ಸರಿ. ದಾವಾ ಸ್ವತ್ತಿನ ಪೂರ್ವ ದಿಕ್ಕಿಗೆ ಮಸೀದಿ ಮತ್ತು ಉಳಿದ ಮೂರು ದಿಕ್ಕಿಗೆ ರಸ್ತೆ ಇದೆ ಎಂದರೆ ಸರಿ. ನನ್ನ ವಾದ ಪತ್ರದಲ್ಲಿ ಸದರಿ ಚೆಕ್ಕು ಬಂದಿಯನ್ನು ಬರೆಸಿಲ್ಲ ಎನ್ನುವುದು ಸರಿ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಯರ ಹಿರಿಯರಿಗೆ ಸೇರಿದ ಮನೆ ಇದೆ ಎನ್ನುವುದು ಸರಿ. ಸಾಕ್ಷಿ ಸ್ವ-ಇಚ್ಛೆಯಿಂದ ಸದರಿ ಮನೆ ಪ್ರತಿವಾದಿಯರ ಹಿರಿಯರದ್ದಲ್ಲ ಬದಲಿಗೆ ಅದು ಮಸ್ತಾನ ಸಾಬನ ಅಣ್ಣನ ಮನೆ ಎನ್ನುತ್ತಾರೆ. ಮಸ್ತಾನ ಸಾಬನ ಅಣ್ಣನ ಹೆಸರು ಅಜೀಜ್ ಸಾಬ. ನಿಪಿ-3 ರ ದಾಖಲೆಗೆ ಅಜೀಜ್ ಸಾಬ ಅಥವಾ ಆತನ ಹೆಂಡತಿ ಮಕ್ಕಳ ಸಹಿ ಪಡೆಯಲಾಗಿದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಅಜೀಜ್ ಸಾಬ ಆಗ ತೀರಿಕೊಂಡಿದ್ದ ಮತ್ತು ದಾವಾ ಸ್ವತ್ತು ಮಸ್ತಾನ ಸಾಬನಿಗೆ ಸಂಬಂಧಪಟ್ಟಿದ್ದರಿಂದ ಅಜೀಜ್ ಸಾಬ

ಮತ್ತು ಆತನ ಹೆಂಡತಿ ಮಕ್ಕಳ ಸಹಿ ಪಡೆದಿಲ್ಲ ಎನ್ನುತ್ತಾರೆ. ಮಸ್ತಾನ ಸಾಬನಿಗೂ ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇರಲಿಲ್ಲ ಹಾಗಾಗಿ ಆತನಿಗೆ ಅದನ್ನು ಮಾರುವ ಅಧಿಕಾರ ಇರಲಿಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವ-ಇಚ್ಛೆಯಿಂದ ಕಳೆದ 50 ವರ್ಷಗಳಿಂದ ದಾವಾ ಸ್ವತ್ತಿನ ದಾಖಲೆ ಮಸ್ತಾನ ಸಾಬನ ಹೆಸರಿಗೆ ಇದೆ ಎನ್ನುತ್ತಾರೆ. ಕಳೆದ 50 ವರ್ಷಗಳಿಂದ ದಾವಾ ಸ್ವತ್ತಿನ ದಾಖಲೆ ಮಸ್ತಾನ ಸಾಬನ ಹೆಸರಿಗೆ ಇದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿಲ್ಲ.

ಹೂವಿನಭಾವಿ ಗ್ರಾಮಸ್ಥರು ದಾವಾ ಸ್ವತ್ತು ಮಸ್ತಾನ ಸಾಬನದಲ್ಲ ಮತ್ತು ಅದು ಮೋದಿನ್ ಸಾಬನಿಗೆ ಸೇರಿದ್ದು ಎಂದು ಪಂಚಾಯತಿಗೆ ಪತ್ರ ಬರೆದಿದ್ದಾರೆ ಎನ್ನುವುದು ಸರಿಯಲ್ಲ. ಸದರಿ ಪತ್ರವನ್ನು ಗ್ರಾಮಸ್ಥರು ಜಿಲ್ಲಾಧಿಕಾರಿ, ವಕ್ಫ ಬೊರ್ಡ ಮತ್ತಿತರ ಅಧಿಕಾರಿಗಳಿಗೂ ಕೊಟ್ಟಿದ್ದರು ಎನ್ನುವುದು ನನಗೆ ಗೊತ್ತಿಲ್ಲ.

ನಿಪಿ-3 ರ ಪತ್ರ ಬರೆಯಲು ಛಾಪಾ ಕಾಗದವನ್ನು ಸದರಿ ಪತ್ರ ಬರೆಯುವ 2-3 ದಿನಗಳ ಮೊದಲು ಖರೀದಿ ಮಾಡಲಾಗಿತ್ತು. ನಿಪಿ-3 ರ ದಾಖಲೆಯಡಿ ನಾನು ದಾವಾ ಸ್ವತ್ತನ್ನು ಖರೀದಿ ಮಾಡಿದ್ದೇನೆ ಎಂಬ ಮಾಹಿತಿಯನ್ನು ಪಂಚಾಯತಿಯವರಿಗೆ ಕೊಟ್ಟಿಲ್ಲ. ಆ ಬಗ್ಗೆ ಈವರೆಗೆ ಪಂಚಾಯತಿಗೆ ಯಾವುದೇ ಮಾಹಿತಿ ಕೊಟ್ಟಿಲ್ಲವೇ ಎಂದು ಸೂಚಿಸಿದರೆ ಸಾಕ್ಷಿ ಮಾಹಿತಿ ಕೊಟ್ಟಿದ್ದೆ ಪಂಚಾಯತಿವರು 2-3 ತಿಂಗಳು ನಾನು ಕೊಟ್ಟಿದ್ದ ಅರ್ಜಿಯನ್ನು ಇಟ್ಟುಕೊಂಡು ಏನು ಮಾಡಲಿಲ್ಲ ಎನ್ನುತ್ತಾರೆ. ಪಂಚಾಯತಿಗೆ ಪತ್ರ ಕೊಟ್ಟ ಬಗ್ಗೆ ನಾನು ಯಾವುದೇ ಸ್ವೀಕೃತಿ ಕೊಟ್ಟಿಲ್ಲ. ಸದರಿ ವಿಚಾರವನ್ನು ನನ್ನ ವಾದ ಪತ್ರದಲ್ಲಿ ಬರೆಸಿಲ್ಲ. ನಿಪಿ-3 ರ ದಾಖಲೆಯನ್ನು ನೋಂದಣಿ ಮಾಡಿಸಿಕೊಡದೆ ಇರುವ ಬಗ್ಗೆ ಮತ್ತು ನನ್ನ ಹೆಸರಿಗೆ ದಾವಾ ಸ್ವತ್ತಿನ ಖಾತೆ ಬದಲಾವಣೆ ಮಾಡದೆ ಇರುವ ಬಗ್ಗೆ ನಾನು ಮಸ್ತಾನ ಸಾಬ ಅಥವಾ ಆತನ ಹೆಂಡತಿ-ಮಕ್ಕಳ ಮೇಲೆ ಯಾವುದೇ ಕೇಸು ಹಾಕಿಲ್ಲ.

ನಿಪಿ-3 ರ ಪತ್ರವನ್ನು ಖಾಜಾ ಮೊಹಿನೊದ್ದಿನ್ ಎಂಬಾತ ಬರೆದಿದ್ದ. ಆತ ಈಗಲೂ ಬದುಕಿದ್ದಾನೆ. ಈ ದಾವೆ ಸಲುವಾಗಿ ನಿಪಿ-3 ರ ದಾಖಲೆಯನ್ನು ನಾನೇ ಸೃಷ್ಠಿ ಮಾಡಿದ್ದೇನೆ ಎನ್ನುವುದು ಸುಳ್ಳು. ಸೃಷ್ಠಿ ಮಾಡಲಾದ ದಾಖಲೆಗಳ ಆಧಾರದ ಮೇಲೆ ಸುಳ್ಳು ದಾವೆ ಸಲ್ಲಿಸಿದ್ದೇನೆ ಎನ್ನುವುದು ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಯರೇ ಸ್ವಾಧೀನ ಇದ್ದಾರೆ ಎಂದರೆ ಸಾಕ್ಷಿ ನಾನೇ ದಾವಾ ಸ್ವತ್ತಿನಲ್ಲಿ ಮನೆ ಕಟ್ಟಿ ಅದನ್ನು ನನ್ನ ತಂಗಿ ರಿಜ್ವಾನಬೇಗಂ ಎಂಬಾಕೆಗೆ ವಾಸಕ್ಕಾಗಿ ಕೊಟ್ಟಿದ್ದೇನೆ

ಎನ್ನುತ್ತಾರೆ. ದಾವಾ ಸ್ವತ್ತಿನಲ್ಲಿ ಮನೆ ಕಟ್ಟಲು ಪಂಚಾಯತಿಯಿಂದ ಪರವಾನಿಗೆ ಪಡೆದಿದ್ದಿರಾ ಎಂದರೆ ಸಾಕ್ಷಿ ದಾವಾ ಸ್ವತ್ತಿನ ಖಾತೆಯನ್ನು ನನ್ನ ಹೆಸರಿಗೆ ಮಾಡಿಲ್ಲ ಹಾಗಾಗಿ ನನ್ನ ಹೆಸರಿಗೆ ಅನುಮತಿ ಕೊಟ್ಟಿಲ್ಲ ಎನ್ನುತ್ತಾರೆ. ಪ್ರತಿವಾದಿಯರೇ ದಾವಾ ಸ್ವತ್ತಿನ ಮಾಲೀಕರು ಮತ್ತು ಕಬ್ಜೆದಾರರಿದ್ದು ನನಗೂ ಸದರಿ ಸ್ವತ್ತಿಗೂ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ. ಮಸ್ತಾನ ಪಟೇಲನ ಹೆಂಡತಿ ಈಗಲೂ ಬದುಕಿದ್ದಾಳೆ ಎಂದರೆ ಸರಿ.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಸ್ವ-ಇಚ್ಛೆಯಿಂದ ಅದನ್ನು ನಾನು ಓದಿಲ್ಲ ಎನ್ನುತ್ತಾರೆ. ಅದನ್ನು ನನ್ನ ವಕೀಲರು ನನಗೆ ಓದಿ ಹೇಳಿದ್ದಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವುದೆಲ್ಲಾ ಸುಳ್ಳು ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**